# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

5ನೇ ಹಂತ, ಬಹುಮಹಡಿಗಳ ಕಟ್ಟಡ, 3ನೇ ಮಹಡಿ, ಬೆಂಗಳೂರು–560001

ಸಂಖ್ಯೆ: ಮಾಹಆ 14 ಆಡಳಿತ 2019 (ಭಾಗ) ದಿನಾಂಕ: 13ನೇ ಜೂನ್ 2022

## ದರಪಟ್ಟಿ ಆಹ್ವಾನಿಸುವ ಕಿರು ಸೂಚನೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ನಾಶಪಡಿಸಲು ಅನುಮೋದನೆಯಾದ ಕಡತಗಳ ಹಾಳೆಗಳನ್ನು ತುಂಡರಿಸಿದ ನಂತರ ವಿಲೇವಾರಿ ಮಾಡಲು ಸಂಸ್ಥೆಗಳಿಂದ ಮುಚ್ಚಿದ ಲಕೋಟೆಯಲ್ಲಿ (ಮೊಹರು) ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ದರಪಟ್ಟಿಯನ್ನು ದಿನಾಂಕ: 30 /06/2022 ರಂದು ಸಂಜೆ 05:30 ಗಂಟೆಗೆವರೆಗೆ ಸ್ವೀಕರಿಸಲಾಗುವುದು. ತುಂಡರಿಸಿದ ಹಾಳೆಗಳ ಕೆ.ಜಿ. ಗೆ ದರವನ್ನು ನಮೂದಿಸಬೇಕು.

| ಕ್ರ.ಸಂ. | ವಿವರಗಳು | ಒಂದು ಕೆ.ಜಿ.ಗೆ |
|---|---|---|
| 1. | ತುಂಡರಿಸಿದ ಹಾಳೆಗಳು | |

**ನಿಯಮಗಳು ಮತ್ತು ಷರತ್ತುಗಳು:**

1. ಕಛೇರಿಯಿಂದ ಪ್ರತ್ಯೇಕ ಯಾವುದೇ ಕೊಟೇಶನ್ ಪತ್ರವನ್ನು ನೀಡಲಾಗುವುದಿಲ್ಲ. ಬೆಂಬಲ ದಾಖಲೆಗಳೊಂದಿಗೆ ಸಂಸ್ಥೆಯ ಲೆಟರ್ ಪ್ಯಾಡ್‌ನಲ್ಲಿ ದರಪಟ್ಟಿಯನ್ನು ಸಲ್ಲಿಸಬೇಕು.
2. ಯಾವುದೇ ಕಾರಣಗಳನ್ನು ನೀಡದೇ ಅಥವಾ ನೀಡಿರುವ ದರಪಟ್ಟಿಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕುಗಳನ್ನು ಆಯೋಗ ಹೊಂದಿದೆ.
3. ವಿಲೇವಾರಿ ಮಾಡಬೇಕಾಗಿರುವ ತುಂಡರಿಸಿದ ಹಾಳೆಗಳನ್ನು ಸರಿಯಾದ ತೂಕಕ್ಕೆ ಒಳಪಡಿಸಿ, ಮೊತ್ತವನ್ನು ಆಯೋಗದ ಲೆಕ್ಕಪತ್ರ ಶಾಖೆಯಲ್ಲಿ ಜಮಾ ಮಾಡಿ ನಂತರವೇ ತುಂಡರಿಸಿದ ಹಾಳೆಗಳನ್ನು ತೆಗೆದುಕೊಂಡು ಹೋಗಬೇಕು.
4. ದರಪಟ್ಟಿಯನ್ನು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಬೆಂಗಳೂರು ಇವರಿಗೆ ಸಲ್ಲಿಸುವುದು.
5. ಪ್ರತಿ ಕೆ.ಜಿ. ತೂಕಕ್ಕೆ ಹೆಚ್ಚು ದರ ನಮೂದಿಸುವ ಬಿಡ್ಡುಗಳನ್ನು ಪರಿಗಣಿಸಲಾಗುವುದು.
6. ಒಂದು ವೇಳೆ ಹೆಚ್ಚು ಮೊತ್ತ ನಮೂದಿಸಿರುವ ಬಿಡ್ಡುದಾರರ ದರವನ್ನು ಪರಿಗಣಿಸಲಾಗುವುದು. ಆದರೆ ಅಂತಹ ಬಿಡ್ಡುದಾರರು ಎಲ್ಲಾ ಬಿಡ್ಡುದಾರರು ಸಲ್ಲಿಸಿರುವ ಬಿಡ್ಡುಗಳಲ್ಲಿನ ದರದಲ್ಲಿ ನಮೂದಿಸಿರುವ ಅತ್ಯಂತ ಹೆಚ್ಚಿನ ಮೊತ್ತವನ್ನು ಪಾವತಿಸಲು ಸಿದ್ದರಿರಬೇಕು.

- 219 -



7. ಒಂದು ವೇಳೆ ಹೆಚ್ಚು ಮೊತ್ತ ನಮೂದಿಸಿರುವ ಬಿಡ್ಡುದಾರರ ಬಿಡ್ಡು ತಿರಸ್ಕೃತಗೊಂಡಲ್ಲಿ ಅಥವಾ ನಿರಾಕರಿಸಿದಲ್ಲಿ ಹೆಚ್ಚು ಮೊತ್ತ ನಮೂದಿಸಿರುವ 2ನೇ ಬಿಡ್ಡುದಾರರನ್ನು ಯಶ್ವಸಿ ಬಿಡ್ಡುದಾರರೆಂದು ಪರಿಗಣಿಸಲಾಗುವುದು.
8. ತುಂಡರಿಸಿದ ಹಾಳೆಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ವೇಟ್‌ಬ್ರೀಡ್ಜ್‌ಅನ್ನು ಬಳಸಬೇಕು ಮತ್ತು ಈ ವ್ಯವಸ್ಥೆಯು ಬಿಡ್ಡುದಾರರ ಜವಾಬ್ದಾರಿಯಾಗಿರುತ್ತದೆ.
9. ಬಿಡ್ಡುದಾರರ ಜಿ.ಎಸ್.ಟಿ., ಪ್ಯಾನ್ ಸಂಖ್ಯೆ ಇತರೆ ವಿವರಗಳನ್ನು ನೀಡಬೇಕು.

ಕಾರ್ಯದರ್ಶಿ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ